ಆರ್.ಬಿ.ಐ/2006–07/222
ಯು.ಬಿ.ಡಿ. ಪಿ.ಸಿ.ಬಿ. ಸು. ಸಂ. 25/09.39/000/06–07

ಡಿಸೆಂಬರ್ 28, 2006

ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ
ಎಲ್ಲ ಪ್ರಾಥಮಿಕ (ಪೌರ) ಸಹಕಾರಿ ಬ್ಯಾಂಕುಗಳು

ಮಾನ್ಯರೆ,

**ಚೆಕ್ ಡ್ರಾಪ್ ಬಾಕ್ಸ್ ಸೌಲಭ್ಯ ಮತ್ತು ಚೆಕ್ ಸ್ವೀಕೃತಿ ಸೌಲಭ್ಯ –ಪೌರ ಸಹಕಾರಿ ಬ್ಯಾಂಕುಗಳು**

ಹಲವಾರು ಬ್ಯಾಂಕ್– ಶಾಖೆಗಳಲ್ಲಿ ಚೆಕ್‌ಗಳನ್ನು ಕೌಂಟರುಗಳಲ್ಲಿ ಸ್ವೀಕರಿಸಲಾಗುತ್ತಿಲ್ಲ ಮತ್ತು ಚೆಕ್‌ಗಳನ್ನು ಚೆಕ್–ಡ್ರಾಪ್–ಬಾಕ್ಸ್ ನಲ್ಲಿಯೇ ಹಾಕುವಂತೆ ಗ್ರಾಹಕರನ್ನು ಒತ್ತಾಯಿಸಲಾಗುತ್ತಿದೆ ಎಂದು ಭಾರತೀಯ ರಿಸರ್ವಬ್ಯಾಂಕ್ ಮತ್ತು ಬ್ಯಾಂಕಿಂಗ್ ಲೋಕಪಾಲರ ಕಚೇರಿಗೆ ಅನೇಕ ದೂರುಗಳು ಬರುತ್ತಲಿವೆ.

2. ಈ ಸಂಬಂಧವಾಗಿ ಬ್ಯಾಂಕುಗಳಿಗೆ, ಗ್ರಾಹಕರು ಚೆಕ್–ಡ್ರಾಪ್–ಬಾಕ್ಸ್‌ನಲ್ಲಿ ಚೆಕ್ ಹಾಕಬೇಕೆಂದು ಒತ್ತಾಯ ಮಾಡಕೂಡದೆಂದು ಆದೇಶಿಸಲಾಗಿದೆ. ಚೆಕ್–ಡ್ರಾಪ್ ಸೌಲಭ್ಯದ ಜೊತೆಯಲ್ಲಿಯೇ ಚೆಕ್‌ಗಳನ್ನು ಚೆಕ್ ಮೌಲ್ಯ–ಸಂಗ್ರಹಣಾ ಕೌಂಟರ್‌ಗಳಲ್ಲಿ ಪಡೆದು ಸ್ವೀಕೃತಿ ನೀಡುವ ಸೌಲಭ್ಯವನ್ನು ಗ್ರಾಹಕರಿಗೆ ಅಲ್ಲಗಳೆಯಲಾಗದು. ಗ್ರಾಹಕರು ಕೌಂಟರ್‌ಗಳಲ್ಲಿ ನೀಡುವ ಚೆಕ್ ಗಳಿಗೆ ಸ್ವೀಕೃತಿಯನ್ನು ನೀಡಲು ಯಾವುದೇ ಶಾಖೆಯೂ ನಿರಾಕರಿಸಕೂಡದು.

3. ಗ್ರಾಹಕರು ಈ ಸಂಬಂಧವಾಗಿ ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳಲನುವಾಗುವಂತೆ ಚೆಕ್–ಡ್ರಾಪ್–ಬಾಕ್ಸ್ ಸೌಲಭ್ಯಗಳಿರುವ ಕಡೆಯಲ್ಲೆಲ್ಲ ಚೆಕ್–ಡ್ರಾಪ್–ಬಾಕ್ಸ ಸೌಲಭ್ಯ ಹಾಗೂ ಕೌಂಟರ್‌ಗಳಲ್ಲಿ ಚೆಕ್ ಸ್ವೀಕೃತಿ ಈ ಎರಡೂ ಆಯ್ಕೆಗಳನ್ನು ಗ್ರಾಹಕರ ಗಮನಕ್ಕೆ ತರುವುದು ಅತ್ಯಗತ್ಯ. ಅದ್ದರಿಂದ ಬ್ಯಾಂಕುಗಳು ಚೆಕ್–ಡ್ರಾಪ್–ಬಾಕ್ಸ್ ಮೇಲೆಯೇ ಈ ಕೆಳಗಿನಂತೆ ಕಡ್ಡಾಯವಾಗಿ ಪ್ರದರ್ಶಿಸಲು ಆದೇಶಿಸಲಾಗಿದೆ.

“”ಗ್ರಾಹಕರು ಕೌಂಟರ್‌ಗಳಲ್ಲೂ ಚೆಕ್‌ಗಳನ್ನು ಸಲ್ಲಿಸಿ ಸಂದಾಯ ಚೀಟಿ ಮೇಲೆ ಸ್ವೀಕೃತಿ ಧೃಡೀಕರಣವನ್ನು ಪಡೆಯಬಹುದಾಗಿದೆ”””””
ಈ ಮೇಲಿನ ಸೂಚನೆಯನ್ನು ಇಂಗ್ಲಿಷ್, ಹಿಂದಿ, ಹಾಗೂ ಆ ರಾಜ್ಯದ ಪ್ರಾದೇಶಿಕ ಭಾಷೆಯಲ್ಲಿ ಪ್ರದರ್ಶಿಸಬಹುದು.

4. ತಲಪಿದ ಬಗ್ಗೆ ಸಂಬಂಧಪಟ್ಟ ನಮ್ಮ ಪ್ರಾದೇಶಿಕ ಕಚೇರಿಗಳಿಗೆ ದಯವಿಟ್ಟು ಸ್ವೀಕೃತಿ ನೀಡುವುದು.

ತಮ್ಮ ವಿಶ್ವಾಸಿ
(ಎನ್. ಎಸ್. ವಿಶ್ವನಾಥನ್)
ಮುಖ್ಯ ಪ್ರಧಾನ ವ್ಯವಸ್ಥಾಪಕ–ಪ್ರಭಾರ